ನಾನು ಅದರ ಬಗ್ಗೆ ಇನ್ನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ. ತಾವು ವಿಶೇಷವಾದ ಗಮನ ಕೊಡಬೇಕು ಎಂದು ಹೇಳುವುದರ ಜೊತೆಯಲ್ಲಿ ಈ ಸೆಂಟ್ರಲ್ ಸೆಕ್ಟರ್, ಸ್ಟೇಟ್ ಸೆಕ್ಟರ್ ಮತ್ತು ಜೆಡ್‌ಪಿ ಸೆಕ್ಟರ್‌ನಿಂದ ವಿತರಣೆ ಆಗುವಂತಹದು ಇದೆಯಲ್ಲಾ, ಇದಕ್ಕೆಲ್ಲಾದರೂ ಒಂದು ಕೋಆರ್ಡಿನೇಷನ್ ಜೆಡ್‌ಪಿ ಲೆವೆಲ್‌ನಲ್ಲಿ ಆಗದೇ ಹೋದರೆ ಸ್ಟೇಟ್‌ನಿಂದ ಆಗುವುದಿಲ್ಲ, ಅಥವಾ ತಾಲ್ಲೂಕ್‌ನಲ್ಲೂ ಆಗುವುದಿಲ್ಲ. ಜೆಡ್‌ಪಿ ಲೆವೆಲ್‌ನಲ್ಲಿ ಈ ಕೋಆರ್ಡಿನೇಷನ್ ಆಗಬೇಕು. ಇಲ್ಲವೆಂದರೆ ಯಾವ್ಯಾವುದೋ ಕಾರ್ಯಕ್ರಮಕ್ಕೆ ಯಾವ್ಯಾವುದೋ ಹಣವನ್ನು ವ್ಯರ್ಥವಾಗಿ ಖರ್ಚು ಮಾಡುತ್ತಿರುತ್ತಾರೆ. ಅದರ ಬಗ್ಗೆ ಇಲಾಖೆಯಿಂದ ತಾವು ಒಂದು ಸುತ್ತೋಲೆಯನ್ನು ಕಳುಹಿಸಬೇಕು ಎಂದು ಹೇಳುತ್ತೇನೆ. ಅದರ ಜತೆಯಲ್ಲಿ ಇಲಾಖೆಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇವೆ. ತಾವು ಈಗಾಗಲೇ ಹೇಳಿದಂತೆ, ಈಗ ತಾಲ್ಲೂಕು ಕೇಂದ್ರಗಳಲ್ಲಿರತಕ್ಕಂಥ ಸಿಬ್ಬಂದಿಗಳನ್ನು ನೋಡಿದರೆ ರೈತರು ಕೃಷಿ ಬಗ್ಗೆ ಯಾರ ಹತ್ತಿರ ಚರ್ಚೆ ಮಾಡಬೇಕು, ತಮ್ಮ ಕಷ್ಟ ಸುಖಗಳನ್ನು ಯಾರ ಹತ್ತಿರ ಹೋಗಿ ಹೇಳಿಕೊಳ್ಳಬೇಕೆಂಬುದು ಗೊತ್ತಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು ಶೇಕಡ 60 ರಿಂದ 70 ರಷ್ಟು ಹುದ್ದೆಗಳು ಕೃಷಿ ಇಲಾಖೆಯಲ್ಲಿ ಖಾಲಿ ಇವೆ. ಇವತ್ತಿನದಿವಸ ರೈತರ ಸಮಸ್ಯೆಗಳನ್ನು ಕೇಳುವುದಕ್ಕೆ ಯಾರದರೊಬ್ಬರು ಕೊನೇಪಕ್ಷ ಇದ್ದಾರೆಂದರೆ ರೈತರಿಗೆ ಒಂದಿಷ್ಟು ಸಮಾಧಾನವಾಗುತ್ತದೆ. ಹಾಗಾಗಿ ಇವರನ್ನು ರೈತ ಸಂಪರ್ಕ ಕೇಂದ್ರವನ್ನು ಮಾಡಿ ನೀವು ಬಿಲ್ಡಿಂಗ್‌ನಲ್ಲಿಟ್ಟಿದ್ದೀರಿ. ಅದನ್ನು ಮೊದಲು ತಪ್ಪಿಸಿ. ಅವರು ರೈತರ ಮಧ್ಯದಲ್ಲಿ ಇರಲಿ. ಇವತ್ತಿನದಿವಸ ರೈತರಿಗೆ ಕಷ್ಟ ಸುಖಗಳನ್ನು ಹೇಳಿಕೊಳ್ಳುವುದಕ್ಕೆ ಯಾರಾದರೊಬ್ಬರು ಸಿಕ್ಕಿದರೆಂದರೆ ಅಷ್ಟಾದರೂ ಒಂದು ಸಹಾಯವಾಗುತ್ತದೆ. ಅದ್ದರಿಂದ, ರೈತರ ಕಷ್ಟಸುಖ ಕೇಳುವುದಕ್ಕೋಸ್ಕರ ಸಂಪರ್ಕ ಕೇಂದ್ರದಿಂದ ಅವರನ್ನು ಹೊರತುಪಡಿಸಿ ಅವರು ರೈತರು ಮಧ್ಯೆ ಇರುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಶ್ರೀನಿವಾಸಗೌಡ:**– ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿರತಕ್ಕಂಥಾದ್ದು ನಿಜವಾಗಿಯೂ ಕೂಡ ಸ್ವಾಗತಾರ್ಹ. ಇದನ್ನು ನಾನು ಪರಿಶೀಲಿಸುತ್ತೇನೆಂದು ತಮ್ಮ ಮುಖಾಂತರ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರಾಟ ಮಳಿಗೆ ತೆರೆಯುವ ಬಗ್ಗೆ**

131(1391) ಶ್ರೀಮತಿ. ಸುನಿತಾ ವೀರಪ್ಪಗೌಡ.ಜೆ (ಬನ್ನೂರು): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳೆಯರು ತಯಾರಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ಪ್ರತ್ಯೇಕ ಮಾರಾಟ ಮಳಿಗೆಗಳನ್ನು ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ:

ಆ) ಇದ್ದರೆ, ಯಾವಾಗ ಇದನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀ ಭಾಗೀರಥಿ ಮರುಳ ಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು)

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಮಹಿಳೆಯರು ತಯಾರಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ತಾಲ್ಲೂಕು ಮಟ್ಟದ ಮಾರಾಟ ಮಳಿಗೆಗಳನ್ನು ನಿರ್ಮಿಸುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಪೂರ್ಣ ಪರಿಶೀಲನೆನಂತರ ಅಗತ್ಯ ಅನುದಾನ ಒದಗಿಸಿ ಕೊಂಡ ನಂತರ ಕಾರ್ಯಗತಗೊಳಿಸಲಾಗುವುದು.

**ಶ್ರೀಮತಿ ಸುನೀತಾ ವೀರಪ್ಪಗೌಡ ಜಿ.:–** ಮಾನ್ಯ ಛೇರ್ಮನ್‌ರವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಆದರೆ, ಅವರು ನೀಡಿರತಕ್ಕಂಥ ಉತ್ತರ ಸಮಂಜಸವಾಗಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ಇವತ್ತಿನದಿವಸ ಸುಮಾರು ಮಹಿಳೆಯರು ತಮ್ಮದೇ ಆದಂಥ ಸ್ವಶಕ್ತಿಯಿಂದ ಅನೇಕ ರೀತಿಯ ಕೈಕಸುಬುಗಳನ್ನು ಮಾಡುತ್ತಿದ್ದಾರೆ. ಹಾಗೆಯೇ, ಗೊಂಬೆಗಳು, ಸ್ವೆಟರ್ಸ್ ಗಾರ್ಮೆಂಟ್ಸ್, ಹಪ್ಪಳ, ಉಪಿನಕಾಯಿ, ಫೆನಾಯಿಲ್, ಮೇಣದಬತ್ತಿ ಅಲ್ಲದೆ ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ತಯಾರು ಮಾಡುತ್ತಿದ್ದಾರೆ. ಅಲ್ಲದೆ ಗೃಹಪಯೋಗಿ ವಸ್ತುಗಳು ಮತ್ತು ಸಾಂಬರ್ ಪದಾರ್ಥಗಳು ಹೀಗೆ ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಸಹ ತಯಾರು ಮಾಡುತ್ತಿದ್ದಾರೆ. ಆದರೆ, ಇವುಗಳನ್ನು ಮಾರಾಟ ಮಾಡಲು ಒಂದು ಒಳ್ಳೆಯ ಮಾರಾಟ ಮಳಿಗೆ ಇಲ್ಲ. ಆದ್ದರಿಂದ, ಇವತ್ತು ಅವರು ಬಂಡವಾಳ ಹಾಕಿ ತಯಾರು ಮಾಡಿರತಕ್ಕಂಥ ವಸ್ತುಗಳಿಗೆ ಪ್ರಚಾರವಿಲ್ಲದೆ ಮನೆಯಲ್ಲಿಯೇ ಇಟ್ಟುಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನದಿವಸ ದೊಡ್ಡ ದೊಡ್ಡ ಕಂಪನಿಗಳು ಬಹಳಷ್ಟು ಬೆರೆಕೆ ವಸ್ತುಗಳನ್ನು ತಯಾರು ಮಾಡುತ್ತಿವೆ. ಇಂಥ ಸಮಯದಲ್ಲಿ ನಮ್ಮ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಏನು ತಯಾರು ಮಾಡುತ್ತಾರೆ ಅವುಗಳನ್ನು ಯಾವುದೇ ಒಂದು ಸ್ಥಳವಿಲ್ಲ. ಆದ್ದರಿಂದ, ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿಮಟ್ಟದಲ್ಲಿ ಅವರಿಗೆ ಮಾರಾಟ ಮಾಳಿಗೆಗಳನ್ನು ಸರ್ಕಾರದಿಂದ ತೆರೆಯಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀಮತಿ ಭಾಗೀರಥಿ ಮುರುಳಸಿದ್ದನಗೌಡ:–** ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಹೇಳತಕ್ಕಂಥ ಮಾತು ಇವತ್ತು ಸತ್ಯವಾಗಿದೆ. ಏಕೆಂದರೆ, ನಮ್ಮಲ್ಲಿ ಮಾರಾಟ ವ್ಯವಸ್ಥೆ ಸರಿಯಾಗಿ ಇಲ್ಲದೇ ಇರುವುದರಿಂದ ಎಲ್ಲಾ ಕಡೆ ನಮ್ಮ ಕಾರ್ಯಕ್ರಮಗಳು ಫೇಲ್ ಆಗುತ್ತಿರುವುದು ಸತ್ಯ ಇವತ್ತು ನಾನು ಎಲ್ಲಿ ಹೋದರೂ ಕೂಡ ಮಹಿಳೆಯರು ತಾವು ತಯಾರು ಮಾಡಿರತಕ್ಕಂಥ ವಸ್ತುಗಳನ್ನು ಮಾರಾಟ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಡಿ ಎಂಬ ಮಾತನ್ನು ಮಾನ್ಯ ಸದಸ್ಯರು ನನಗೂ ಕೂಡ ತಿಳಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಈಗಾಗಲೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ನಾನು ತಂದಿದ್ದೆ. ಅದೇನೆಂದರೆ, ತಾಲ್ಲೂಕು ಮಟ್ಟದಲ್ಲಿ ಒಂದು ಮಾರಾಟ ಮಳಿಗೆಯನ್ನು ನಿರ್ಮಾಣ ಮಾಡತಕ್ಕಂಥ ವಿಷಯದ ಬಗ್ಗೆ ಚರ್ಚಿಸಿ ಅದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕಂಥ ಒಂದು ವ್ಯವಸ್ಥೆಯನ್ನು ನಾನು ಮಾಡಿಕೊಂಡಿದ್ದೇನೆ. ಹಣಕಾಸಿನ ವ್ಯವಸ್ಥೆ ಆದ ತಕ್ಷಣವೇ ತಾವು ಹೇಳಿದಂತೆ ಮಹಿಳೆಯರು ತಯಾರು ಮಾಡತಕ್ಕಂಥ ವಸ್ತುಗಳನ್ನು ಮಾರಾಟ ಮಾಡುವುದಕ್ಕೋಸ್ಕರ ತಾಲ್ಲೂಕು ಮಟ್ಟದಲ್ಲಿ ಒಂದು ಮಾರಾಟ ಮಳಿಗೆಯನ್ನು ತೆರೆಯುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ, ಮಾರಾಟ ಮಳಿಗೆ ಆಗುವ ತನಕ ಮಾರಾಟ ಮೇಳವನ್ನು ರಾಜ್ಯದಲ್ಲಿ ಎರಡು ಬಾರಿ ಮತ್ತು ಜಿಲ್ಲಾಮಟ್ಟದಲ್ಲಿ ಒಂದು ಬಾರಿ ಏರ್ಪಾಟು ಮಾಡುತ್ತಾ ಇರತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಮತ್ತೆ 365 ದಿವಸವೂ ಸ್ತ್ರೀ ಶಕ್ತಿ ಸಂಘಗಳ ಮಹಿಳೆಯರು ತಯಾರು ಮಾಡತಕ್ಕಂಥ ವಸ್ತುಗಳನ್ನು ಮಳಿಗೆಗೆ ತಂದು ಮಾರಾಟ ಮಾಡಬೇಕೆಂಬ ಉದ್ದೇಶದಿಂದ ಇವತ್ತಿನದಿವಸ ಕೋರಮಂಗಲದಲ್ಲಿ 150x300 ಅಳತೆಯ ನಿವೇಶನದಲ್ಲಿ ವಿವಿಧ ಅಳತೆಯ 200 ಮಳಿಗೆಗಳನ್ನು ಪ್ರಾರಂಭ ಮಾಡಬೇಕೆಂಬ ಒಂದು

ಯೋಚನೆಯನ್ನು ಇಟ್ಟುಕೊಂಡಿದ್ದೇವೆ. ಇದಕ್ಕೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಬೇಕಾಗಿದ್ದು ಸದರಿ ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈಗ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿರುವುದರಿಂದ, ಆದಷ್ಟು ಬೇಗ ಇದಕ್ಕೆ ಮಂಜೂರಾತಿ ಕೊಡಬೇಕೆಂದು ಇಲ್ಲಿರುವ ಎಲ್ಲಾ ಮಹಿಳಾ ಸದಸ್ಯರ ಪರವಾಗಿ ಮತ್ತು ತಮ್ಮಪರವಾಗಿ ಕೂಡ ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಜೆ.ಸುನೀತಾ ವೀರಪ್ಪಗೌಡ:**– ಮಾನ್ಯ ಮುಖ್ಯಮಂತ್ರಿಯವರು ಇಲ್ಲಿರುವುದರಿಂದ, ಅವರಲ್ಲಿ ಕೇಳುವುದೇನೆಂದರೆ, ಮಾರಾಟ ಮಳಿಗೆ ಹೋಬಳಿಮಟ್ಟದಲ್ಲಿ ಆಗಲೇ ಬೇಕಾಗಿದೆ. ಏಕೆಂದರೆ, ಇವತ್ತಿನದಿವಸ ಲಕ್ಷಾಂತರ ಸ್ತ್ರೀಶಕ್ತಿ, ಸ್ವಸಹಾಯ ಸಂಘಗಳು ಆಗಿವೆ. ಮತ್ತೆ ಅವರು ಮೀಟಿಂಗ್ ಮಾಡುವುದಕ್ಕೆ ಒಂದು ಸ್ಥಳವಿಲ್ಲ. ಮಹಿಳಾ ಸಮುದಾಯ ಭವನಗಳೂ ಕೂಡ ಇವತ್ತು ಆಗಬೇಕಾಗಿದೆ. ಏಕೆಂದರೆ, ಮಹಿಳೆಯರು ತಾವೇ ಜಾಗವನ್ನು ಕೊಂಡುಕೊಂಡು ಸರ್ಕಾರಕ್ಕೆ ಬರೆಯುತ್ತೇವೆ, ನೀವು ಒಂದು ಸಮುದಾಯ ಭವನವನ್ನು ಕೊಟ್ಟಿಸಿಕೊಡಿ' ಎಂಬ ಮಟ್ಟಕ್ಕೆ ನಮ್ಮ ಮಹಿಳೆಯರು ಬಂದಿದ್ದಾರೆ. ಅದ್ದರಿಂದ, ಪ್ರತಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಒಂದು ಮಹಿಳಾ ಸಮುದಾಯ ಭವನವನ್ನು ಕಟ್ಟಿಸಿ ಹಂತ ಹಂತವಾಗಿ ಪ್ರತಿ ಊರಿನಲ್ಲೊಂದು ಮಹಿಳಾ ಸಮುದಾಯ ಭವನವನ್ನು ಕಟ್ಟಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ:**– ಈಗಾಗಲೇ ಈ ಎಲ್ಲಾ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಸ್ತ್ರೀಶಕ್ತಿ ಭವನ ಮತ್ತು ಮಾರಾಟ ಮಳಿಗೆಯ ವಿಚಾರವನ್ನು ನಾನು ಚರ್ಚೆ ಮಾಡಿ ಇದಕ್ಕೆ ಹಣಕಾಸಿನ ವ್ಯವಸ್ಥೆ ಆದತಕ್ಷಣವೇ ಪ್ರಾರಂಭ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಛೇರ್ಮನ್‌ರವರ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:**– ಮಾನ್ಯ ಛೇರ್ಮನ್‌ರವರೆ, ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಂದು ವಿಷಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಇಡೀ ರಾಜ್ಯದಲ್ಲಿ ಸ್ತ್ರೀಶಕ್ತಿ ಸಂಘಗಳು ಬಹಳ ಜಾಸ್ತಿಯಾಗುತ್ತಿರುವುದನ್ನು ತಾವೂ ಕೂಡ ಗಮನಿಸಿದ್ದೀರಿ. ಸ್ತ್ರೀಶಕ್ತಿ ಬ್ಯಾಂಕ್‌ನ್ನು ಕೂಡ ಮಾಡುತ್ತೇವೆಂದು ಕಳೆದ ತಮ್ಮ ಬಜೆಟ್‌ನಲ್ಲಿ ತಾವು ಹೇಳಿದ್ದೀರಿ. ಇದಕ್ಕೆ ರಿಸರ್ವ್ ಬ್ಯಾಂಕ್‌ನಿಂದ ಸಮಸ್ಯೆ ಬಂದಿದೆ ಎಂದು ನಾವು ತಮ್ಮ ಮನೆ ಮುಂದೆ ಧರಣಿ ಮಾಡಿದಂಥ ಸಂದರ್ಭದಲ್ಲಿ ಈ ಮಾತನು ತಾವು ಹೇಳಿದಿರಿ. ಇದಕ್ಕೆ ಏನಾದರೂ ಪರಿಹಾರ ಮಾಡಿ ಮುಂದೆ ಬರುವಂಥ ಬಜೆಟ್‌ನಲ್ಲಿ ನಾನು ಹೇಳತಕ್ಕಂಥ ಎರಡು ವಿಚಾರಗಳನ್ನು ತಾವು ಗಮನಿಸಬೇಕು. ಇದರಲ್ಲಿ ಮೊದಲನೆಯದು ಏನೆಂದರೆ, ಮಹಿಳೆಯರಿಗೋಸ್ಕರ ಹೋಬಳಿ ಮಟ್ಟದಲ್ಲಿಯಾದರೂ ಈ ಒಂದು ಸಮುದಾಯ ಭವನವನ್ನು ತಾವು ನಿರ್ಮಾಣ ಮಾಡಿಸಬೇಕು; ಮತ್ತೆ ಎರಡನೆಯದು, ಸ್ತ್ರೀಶಕ್ತಿ ಕೇಂದ್ರಕ್ಕೋಸ್ಕರ ಒಂದು ಬ್ಯಾಂಕ್‌ನ್ನು ಪ್ರಾರಂಭ ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು):**– ಮಾನ್ಯ ಛೇರ್ಮನ್‌ರವರೆ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸ್ತ್ರೀಶಕ್ತಿ ಬಗ್ಗೆ ಸ್ವಲ್ಪ ಕೆಲಸವಾಗಿದೆ. ಹಾಗೆಯೇ, ಅವರಲ್ಲಿ ವಿಶ್ವಾಸ ಮೂಡಿಸುವಂಥ ರೀತಿಯಲ್ಲಿ ಸಾಕಷ್ಟು ಸಂಘಸಂಸ್ಥೆಗಳ ಮೂಲಕ ಸಹಾಯ ಮಾಡತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈಗೇನು ತಾವು ಹೇಳಿದ ಹಾಗೆ ಮುಂದೆ ಬರತಕ್ಕಂಥ ಬಜೆಟ್‌ನಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆ ಕೊಡುವುದಲ್ಲದೆ ಹಣವನ್ನೂ ಕೂಡ ಒದಗಿಸಲಾಗುತ್ತದೆ.